ಪ್ರದೇಶ ನಿಮ್ಮದದ್ದು ಮುಳುಗಡೆಯಾಗಿದೆ. ಇಂಡಿ ಕೆನಾಲ್‌ನ ವಾಟರ್ ಪ್ಲಾನ್‌ನ್ನು ರಿವೈಸ್ ಮಾಡಿ ಇಂಡಿ ಕೆನಾಲ್‌ಅನ್ನು ಪ್ರಾರಂಭ ಮಾಡಿದವರು ಜನತಾ ಸರಕಾರದವರು ಎಂಬುದನ್ನು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. 1986ರಲ್ಲಿ ನಾವು ಆ ಕೆಲಸವನ್ನು ಮಾಡದಿದ್ದರೆ ಈ ಒಂದೂವರೆ ಲಕ್ಷ ಎಕರೆಗೂ ನೀರಾವರಿ ಬರುತ್ತಾ ಇರಲಿಲ್ಲ. ನಾನು ಮುಳವಾಡ ಲಿಫ್ಟ್ ಸ್ಕೀಮ್‌ನ ಬಗ್ಗೆ ಕೂಡ ಗಮನ ಇಟ್ಟಿದ್ದೇನೆ. ನಾನು ಹಣ ಜೋಡಿಸುವುದಾದರೆ ಮೇಲ್ಭಾಗದಲ್ಲಿದ್ದು ನಾನು ಹೆದರಿಕೊಳ್ಳಬೇಕೇ? ಆ ಕಡೆಯಲ್ಲಿರುವ ನೀವು ನನಗೆ ಸಹಕಾರ ಕೊಡಬೇಕು. ನಿಮ್ಮ ಸಹಕಾರದಿಂದ ಬಾಕಿ ಕೆಲಸಗಳನ್ನು ಮಾಡಲು ನಾನು ಸಿದ್ಧನಿದ್ದೇನೆ.

ಶ್ರೀ ಜಿ. ಶಂಕರೇಗೌಡ (ಹೊಸಪೇಟೆ) : ನಮ್ಮಲ್ಲಿ ತುಂಗಭದ್ರಾ ನೀರನ್ನು ತಡೆಹಿಡಿದಿದ್ದಾರೆ. 15-4-95 ರಂದು ತಡೆಹಿಡಿದಿದ್ದಾರೆ. ಇದರಿಂದಾಗಿ ನಮಗೆ ತೊಂದರೆಯುಂಟಾದ ಬಗ್ಗೆ ಹಾಸೂ ನೀರನ್ನು ಬಿಡಿಸುವ ಬಗ್ಗೆ ತಾವುಗಳು ಉತ್ತರ ಕೊಟ್ಟಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಆ ನೀರಿನ ಕೊನೆಯ ಡ್ರಾಫ್ಟ್‌ವರೆಗೂ ಕೊಡಲು ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೇ, ನಿಮಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಇತರರಿಗೂ ನಾನು ಅವಕಾಶ ಕೊಡಬೇಕಲ್ಲಾ? ನಾನು ಎಲ್ಲಾ ಶಾಸಕರಿಗೆ ಸಮಾನ ಅವಕಾಶ ಕಲ್ಪಿಸಿ ಕೊಡಬೇಕಾದ ಹೊಣೆಯನ್ನು ಹೊತಿದ್ದೇನೆ. ತಾವು ನನಗೆ ಸಹಕಾರ ನೀಡಬೇಕು. ತಾವು ಹೀಗೆ ಮಾಡಿದರೆ ಕಷ್ಟವಾಗುತ್ತದೆ.

ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನನ್ನ ಮನವಿ ಏನೆಂದರೆ ಬಹಳ ದಿನಗಳಿಂದ ಕಡಲಕ್ಕನಕೆರೆ ಯೋಜನೆಯು ನೆನೆಗುದಿಗೆ ಬಿದ್ದಿರುವುದು ತಮಗೆ ಗೊತ್ತಿದೆ. ಇದನ್ನು ಹಾರಂಗಿ ಎರಡನೇ ಹಂತದ ಯೋಜನೆ ಎಂದು ಕರೆಯುತ್ತಾರೆ. ಸರ್ಕಾರ ಇದನ್ನು ಕೈಗೆತ್ತಿಕೊಂಡು ಇಧನ್ನು ಹಾರಂಗಿ ಎರಡನೇ ಹಂತದ ಯೋಜನೆ ಎಂದು ಕರೆಯುತ್ತಾರೆ. ಇದನ್ನು ಎಷ್ಟು ಸಮಯದಲ್ಲಿ ಮುಗಿಸುತ್ತೀರಿ ಎಂಬ ಬಗ್ಗೆ ಹೇಳಬೇಕು. ಇದರಿಂದ ಕೆ.ಆರ್. ನಗರ, ಪಿರಿಯಪಟ್ಟಣ ಹುಣಸೂರು ಮೂರು ತಾಲ್ಲೂಕುಗಳಿಗೆ ಪ್ರಯೋಜನವಾಗುತ್ತದೆ. ಇದನ್ನು ದಯಮಾಡಿ ಕೈಗೆತ್ತಿಕೊಂಡು ತ್ವರಿತವಾಗಿ ಮುಗಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಆ ಎಲ್ಲಾ ಯೋಜನೆಗಳನ್ನು ಒಂದನೇಯ ಹಂತದಲ್ಲಿ ತೆಗೆದುಕೊಂಡು ಬಂದು 1980ರಲ್ಲಿ ಅವೆಲ್ಲವನ್ನು ರೀಕಾಸ್ಟ್ ಮಾಡಿದ ಉದ್ದೇಶ ಏನೆಂದರೆ ಮುಂದೆ ಟ್ರಿಬ್ಯುನಲ್ ಮುಂದೆ ಅನಾಹುತವಾದರೆ ನಮ್ಮ ಕ್ಲೈಮ್ ಏನಿಡಬೇಕೆಂದು ಮಾಡಿ ಎಲ್ಲಾ ಮುಂದಾಲೋಚನೆಯಿಂದ ಮಾಡಿದ್ದಾಗಿದೆ. ಆ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಇದರಲ್ಲಿ ಮೊದಲನೆ ಯೋಜನೆ ಎರಡನೇ ಯೋಜನೆ ಎಂದು ಇಲ್ಲ.

ಅಧ್ಯಕ್ಷರು : ಇಲ್ಲಿಗೆ ಚರ್ಚೆ ಮುಕ್ತಾಯವಾಗಿದೆ.

ಪ್ರಕಟಣೆ

ಮಾನ್ಯ ಸಭಾಪತಿಯವರು, ಈ ಕೆಳಕಂಡ ಸಂದೇಶವನ್ನು ಕಳುಹಿಸಿರುತ್ತಾರೆ. "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 116ರ ಮೇರೆಗೆ ಕರ್ನಾಟಕ ವಿಧಾನಪರಿಷತ್‌ನಲ್ಲಿ 19-4-995ರಂದು ಕರ್ನಾಟಕ ಸ್ಥಳೀಯ

ಪುನರ್ ಪರಿಶೀಲಿಸಲಾಯಿತು, ಹಾಗೂ ಯಾವುದೇ ವಿಧೇಯಕವನ್ನು ಅಂಗೀಕರಿಸಲಾಯಿತು ಎಂದು ಈ ಮೂಲಕ ತಿಳಿಸುತ್ತಿದ್ದೇನೆ.

ಶಾಸನ ರಚನಾ ಕಾರ್ಯಕಲಾಪಗಳು

(i) ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ತಿದ್ದುಪಡಿ) ವಿಧೇಯಕ, 1995

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು) : ಸನ್ಮಾನ್ಯ ಅಧ್ಯಕ್ಷರೇ, "ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ತಿದ್ದುಪಡಿ) ವಿಧೇಯಕ, 1995ನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, "ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ತಿದ್ದುಪಡಿ) ವಿಧೇಯಕ, 1995ನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ತಿದ್ದುಪಡಿ) ವಿಧೇಯಕ, 1995ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ii) ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕ 1995

ಶ್ರೀ ವೈಜನಾಥ ಪಟೇಲ್ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "1995ರ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವನೆ ಏನೆಂದರೆ : "1995ರ ಸಾಲಿನ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆಯೇ ಮಾತನಾಡಿದರೆ ಮಾತನಾಡಬಹುದು. ತಮಗೆ ಏನು ನಾನು ಹೇಳುತ್ತೇನೆ ಎಂದರೆ ಈಗ ವಿಧೇಯಕವನ್ನು ಮಂಡಿಸಿದ್ದಾರೆ. ಇದರ ಬಗ್ಗೆ ಚರ್ಚೆಗೆ ಬಂದಾಗ ಮಾತನಾಡುತ್ತೇನೆ. ಬಂದಾಗ ನಾನು ಬೇರೆ ವಿಚಾರ ಕೇಳಬಹುದೇ? ಈಗ ನಾನು ಬೇರೆ ವಿಚಾರ ಕೇಳಬಹುದೇ ತಾವು ಕೇಳಿ ಎಂದರೆ ಕೇಳುತ್ತೇನೆ.

ಅಧ್ಯಕ್ಷರು : ಇನ್ನೊಂದೆರಡು ಬಿಲ್ಸ್‌ಗಳು ಇವೆ. ಪರ್ಯಾಲೋಚನೆಗೆ ತೆಗೆದುಕೊಂಡು ಮುಗಿಸಿಬಿಡೋಣ.